ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-4 Issue 6, May-June, 2023, Pp 10-15.
©*IIMRD*, Mysuru

IIMRD JOURNALS
www.iimrd.com

# ಆಧುನಿಕ ಕನ್ನಡ ವಚನ ಸಾಹಿತ್ಯದಲ್ಲಿ ಸಾಮಾಜಿಕ ಸಂವೇದನೆ

**ಸಿ. ಚಂದರಶೇಖರ ರೆಡ್ಡಿ***

*ಸಂಶೋಧನಾ ವಿದ್ಯಾರ್ಥಿ, ದ್ರಾವಿಡ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.

***ಸಾರಾಂಶ:(Abstract)***

*ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವಚನ ಸಾಹಿತ್ಯಕ್ಕೆ ವಿಶೇಷವಾದ ಮತ್ತು ವಿಶಿಷ್ಟವಾದ ಸ್ಥಾನವಿದೆ. ವಚನ ಸಾಹಿತ್ಯ ವ್ಯಕ್ತಿತ್ವ ವಿಕಸನದ ಸಾಹಿತ್ಯ. ಅದು ಅನುಭಾದ ಸಾಹಿತ್ಯ ಪರಿಪೂರ್ಣ ಮಾನವನನ್ನಾಗಿ ಮಾಡುವ ಬುದ್ಧಿ ಭಾವಗಳ ವಿಕಸನದ ಸಾಹಿತ್ಯ. ವಚನ ಸಾಹಿತ್ಯ ಕೇವಲ ಧಾರ್ಮಿಕ ಸಾಹಿತ್ಯವಲ್ಲ, ಶುಷ್ಕ ಧರ್ಮಾಚರಣೆಗಳನ್ನು ಮೀರಿದ ವೈಚಾರಿಕ ಸಾಹಿತ್ಯ ಮಾನವೀಯತೆ ವಚನ ಸಾಹಿತ್ಯದ ಹೃದಯದ ಬಡಿತ. ಸಮಾನತೆ ಅದರ ನಾಡಿ ಮಿಡಿತ. ವಚನ ಸಾಹಿತ್ಯ ಅರಸೊತ್ತಿಗೆಯ ಸಾಹಿತ್ಯವಲ್ಲ. ಕಾಯಕ ಜೀವಿಗಳ ಸಾಹಿತ್ಯ ಇಂತಹ ವಚನ ಸಾಹಿತ್ಯದ ಜ್ಯೋತಿಯನ್ನು ಬಸವಾದಿ ಶರಣರು 12ನೇ ಶತಮಾನದಲ್ಲಿ ಹೊತ್ತಿಸಿದರು ಅಂದು ಹೊತ್ತಸಿದ ಜ್ಯೋತಿ ಇಂದಿಗೂ ಬೆಳಗುತ್ತಲೇ ಇದೇ ಜಾತಿಭೇದ ವರ್ಣಭೇದ ಲಿಂಗಭೇದ ವರ್ಗ ಭೇದಗಳ ವಿರುದ್ಧ ಹೋರಾಡಿದ ಸಾಂಸ್ಕೃತಿಕ ಸಂದರ್ಭದಲ್ಲಿ ಜನ್ಮ ತಳೆದ ಈ ವಚನ ಸಾಹಿತ್ಯವು ಆಧುನಿಕ ಕಾಲದ ಹೋರಾಟಗಾರರಿಗೂ ಸಾಹಿತಿಗಳಿಗೂ ಸಾಮಾಜಿಕ ಧಾರ್ಮಿಕ ಚಿಂತಕರಿಗೂ ಸ್ಫೂರ್ತಿಯ ಗಂಗೋತ್ರಿಯಾಗಿದೆ.*

***ಮುಖ್ಯಪದಗಳು (Keywords)*** *ಆಧುನಿಕ ಕನ್ನಡ ಸಾಹಿತ್ಯ, ವಚನ ಸಾಹಿತ್ಯ, ಸಾಮಾಜಿಕ ಸಂವೇಧನೆ, ಬಸವಾದಿ ಶರಣರು.*

**ಪೀಠಿಕೆ**

"Sensation' ಎಂಬ ಆಂಗ್ಲ ಪದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ ಸಂವೇದನೆ' ಎಂದು ಪದವಿದೆ. ಇಲ್ಲಿ ಸಂವೇದ, ಸಂವೇದನೆ ಎಂದು ನಿಷತ್ತಿಗೊಳಿಸಿ, ಸಂವೇದನೆ ಎಂದರೆ–'ಅನಿಸುವಿಕೆ, ಮನಸ್ಸಿಗೆ ತಟ್ಟುವಿಕೆ, ಅನುಭವ, ಹೊಳೆಯುವಿಕೆ, ಜ್ಞಾನ, ಭಾವನೆ, ಗ್ರಹಿಕೆ, ಅರಿವು" ಎಂಬ ಅರ್ಥಗಳನ್ನು ವಿದ್ವಾಂಸರು ನೀಡಿದ್ದಾರೆ. ಇಲ್ಲಿ 'ಸಂವೇದನೆ' ಎಂಬ ಪದಕ್ಕೆ ಪರಾಯವಾಗಿ ವ್ಯಕ್ತಿಯ ಭಾವನೆ, ತಿಳುವಳಿಕೆ ಮತ್ತು ಅಂತರಾಳದ ಅಭಿವ್ಯಕ್ತಿಗೆ ಹೆಚ್ಚಿನ ಮಾನ್ಯತೆ ನೀಡಲಾಗಿದೆ. ಹೀಗಾಗಿ 'ಸಂವೇದನೆ ಎಂದರೆ ಯಾವುದೇ ಜನಾಂಗದ ಯಾವುದೇ ವ್ಯಕ್ತಿಯ ಅಂತರಂಗದ ಅಳಲಿನ ಅಭಿವ್ಯಕ್ತಿ ಎಂದು ಹೇಳಲಾಗಿದೆ. ಇದಕ್ಕೆ ಪೂರಕವಾಗಿ ನಾಗಭೂಷಣ ಸ್ವಾಮಿಯವರು ಯಾವುದೇ ಅನುಭವಕ್ಕೆ ವ್ಯಕ್ತಿಯೊಬ್ಬನ ವಿಶಿಷ್ಟವಾದ

*Please cite this article as: ಸಿ. ಚಂದರಶೇಖರ ರೆಡ್ಡಿ.* (2023). ಆಧುನಿಕ ಕನ್ನಡ ವಚನ ಸಾಹಿತ್ಯದಲ್ಲಿ ಸಾಮಾಜಿಕ ಸಂವೇದನೆ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 4(6). ಪು.ಸಂ. 10–15.*

ಭಾವನಾತ್ಮಕ ಮತ್ತು ಬೌದ್ಧಿಕ ಪ್ರಕ್ರಿಯೆಯೇ ಸಂವೇದನೆ' ಎಂದಿದ್ದಾರೆ. ಒಟ್ಟಾರೆ ಮೇಲಿನ ಎಲ್ಲ ಹೇಳಿಕೆಗಳನ್ನು ಕ್ರೋಢೀಕರಿಸಿ ಹೇಳುವುದಾದರೆ 'ಸಂವೇದನೆ' ಎನ್ನುವುದು ವ್ಯಕ್ತಿನಿಷ್ಠ ಪ್ರತಿಭೆಯ ಕಾಣ್ಕೆ. ಇದು ತಾತ್ವಿಕ ಪರಿಭಾಷೆಯಾಗಿ ವಿಭಿನ್ನ ನೆಲೆಯಲ್ಲಿ ವ್ಯಕ್ತಿ, ಲಿಂಗ, ಕೋಮು, ವರ್ಗಗಳ ಸಂವೇದನೆಯಾಗಿ ಮಾರ್ಪಡುವುದರ ಮೂಲಕ ದಲಿತ ಸಂವೇದನೆ, ಮುಸ್ಲಿಂ ಸಂವೇದನೆ, ಸೀ ಸಂವೇದನೆ, ಸಾಮಾಜಿಕ ಸಂವೇದನೆಯಾಗಿ ಇಂದು ಸೈದ್ಧಾಂತಿಕವಾಗಿ ಅಭಿವ್ಯಕ್ತಿಗೊಳ್ಳುತ್ತಿದೆ.

**ಆಧುನಿಕ ವಚನ ಸಾಹಿತ್ಯದಲ್ಲಿ ಸಮಾಜಿಕ ಸಂವೇದನೆ**

ಆಧುನಿಕ ವಿದ್ಯಮಾನಗಳಿಗೆ ಸಾಂಸ್ಕೃತಿಕ ಸಂಕಟಗಳಿಗೆ ಸಮಕಾಲೀನ ಸಂದರ್ಭದಲ್ಲೂ ವಚನಗಳ ಮೂಲಕ ಅಭಿವ್ಯಕ್ತಿ ಪಡಿಸಿ ಆಧುನಿಕ ವಚನಕಾರರು ವಚನ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಆಧುನಿಕ ವಚನಕಾರರು ಸಮಾಜಮುಖಿಯಾಗಿ, ಶೋಷಣೆಯನ್ನು ಪ್ರತಿಭಟಿಸಿ, ಜಾತಿಭೇದ, ವರ್ಣಭೇದ, ಲಿಂಗಭೇದ ಕಂದಚಾರಗಳ ವಿರುದ್ಧ ವಚನಗಳ ಮೂಲಕ ಜನಮನ ಮುಟ್ಟುವಂತೆ ದನಿಯೆತ್ತಿದ್ದಾರೆ. ಸರ್ವಶ್ರೀ ಸಿದ್ಧಯ್ಯ ಪುರಾಣಿಕ, ಎಸ್.ವಿ. ಪರಮೇಶ್ವರ ಭಟ್, ಎಸ್.ವಿ.ರಂಗಣ್ಣ, ಮಹದೇವ ಬಣಕಾರ, ಡಾ. ಮುಜಗಂ. ಡಾ. ಶರಣ ಬಸಪ್ಪ ಅಪ್ಪ, ಶ್ರೀ ಅನ್ನದಾನೇಶ್ವರ್ ಸ್ವಾಮಿಗಳು, ಹೀಗೆ ಮುಂತಾದವರು ವಚನ ಸಾಹಿತ್ಯ ಪ್ರಕಾರವನ್ನು ತಮ್ಮದೇ ಆದ ರೀತಿಯಲ್ಲಿ ದುಡಿಸಿಕೊಂಡಿದ್ದಾರೆ.

ಡಾ. ಶಿವಮೂರ್ತಿ ಮುರುಘಾಶರಣರು ನಮ್ಮೊಂದಿಗಿರುವ ಆಧುನಿಕ ವಚನಕಾರರು. ಬಸವಾದಿ ಶರಣರ ವಚನಗಳ ಆದರ್ಶಗಳಾದ ಸರಳತೆ ಸಮಾನತೆ ಮನೋಭಾವ ಮತ್ತು ಮಾನವೀಯತೆಗಳನ್ನು ಮೈಗೂಡಿಸಿಕೊಂಡ ಧಾರ್ಮಿಕ ಚಿಂತಕರು. ಮುರುಘಾ ಶರಣರ ವಚನಗಳು ಅವರಂತೆ ಅವರ ಬದುಕಿನಂತೆ ಸರಳ ಮತ್ತು ಉದಾತ್ತ. ಶ್ರೀಗಳು ಬಸವಾದಿ ಶರಣರ ಉದಾತ್ತ ಚಿಂತನೆಗಳನ್ನು ಮೊದಲು ತಾವು ಶೋಧಿಸಿ ಸಾದಿಸಿ ಬೋಧಿಸುತ್ತಾ ಬಂದಿದ್ದಾರೆ.

ಶ್ರೀ ಮುರುಘಾಶರಣರು 'ಬಸವಪ್ರಭು ಮುರುಘೇಶ' ಎಂಬ ಅಂಕಿತನಾಮದಲ್ಲಿ ಎರಡು ಆಧುನಿಕ ವಚನ ಕೃತಿಗಳನ್ನು ರಚಿಸಿದ್ದಾರೆ. ಇವರ 'ವಚನ ಕ್ರಾಂತಿ ಮತ್ತು ವಚನ ಶ್ರೀ' ಕೃತಿಗಳಲ್ಲಿ ಒಟ್ಟು 233 ವಚನಗಳು ಸೇರಿವೆ ಎಲ್ಲಾ ವಚನಗಳಲ್ಲಿ ಕಂಡು ಬರುವ ವಿಶೇಷವೆನೆಂದರೆ ಎಲ್ಲಾ ವಚನಗಳಿಗೂ ಶೀರ್ಷಿಕೆಗಳಿವೆ. ಇವರ ಆಧುನಿಕ ವಚನಗಳಲ್ಲಿ ಹೊಸ ಒಳನೋಟಗಳಿವೆ ಆಧುನಿಕ ಸಂವೇದನೆಗಳಿವೆ. ಮುರುಘಾ ಶರಣರ ವಚನಗಳಲ್ಲಿಯ ಚಿಂತನೆಗಳು ದೈವಕೇಂದ್ರಿತವಲ್ಲ, ಬದಲಾಗಿ ಮಾನವ ಮಾನವಕೇಂದ್ರಿತ. ಈ ಭೂಮಿಯ ಮೇಲೆ ಮನುಕುಲ ಸುಖ ಶಾಂತಿಯಿಂದ ಬಾಳಬೇಕೆಂದು ಅವರ ಹಂಬಲ ದೇವಲೋಕ ಸ್ವರ್ಗ ಲೋಕ ಇವುಗಳಲ್ಲಿ ನಂಬಿಕೆ ಇಲ್ಲ ಎಂಬುದು ಈ ಕೆಳಗಿನ ವಚನಗಳಲ್ಲಿ ಕಂಡುಬರುತ್ತದೆ.

***ದೇವಲೋಕ ನಾನರಿಯೇ, ನಾಗಲೋಕ ನಾನರಿಯೋ***
***ಬಸವ ಪ್ರಭು ಮುರುಗೇಶ***
***ಭೂಲೋಕ ಸತ್ಯಲೋಕವೆಂದು ಅರಿತು***
***ಅಲ್ಲಿ ಸಲ್ಲಿದರೆ ಮತ್ತೆಲ್ಲೂ ಸಲ್ಲುವ ಅಗತ್ಯವಿಲ್ಲವಯ್ಯ***

ಈ ಭೂಲೋಕದಲ್ಲಿ ನಮ್ಮ ಬದುಕು ಸಲ್ಲಬೇಕಾದರೆ ಸುಖ ಶಾಂತಿಯಿಂದ ಕೂಡಿರಬೇಕಾದರೆ ಪ್ರತಿಯೊಬ್ಬರೂ ಅಂತರಂಗದ ಸೌಂದರ್ಯವನ್ನು ಹೆಚ್ಚಿಸಿಕೊಳ್ಳಬೇಕು. ನಮ್ಮ ತುಟಿಗಳಿಗೆ ಸತ್ಯವೇ ಶೃಂಗಾರವಾಗಬೇಕು, ಕಂಗಳಿಗೆ ಕರುಣೆಯೇ ಶೃಂಗಾರವಾಗಬೇಕು ನಮ್ಮ ಕರಗಳಿಗೆ ಪರೋಪಕಾರವೇ ಶೃಂಗಾರವಾಗಬೇಕು ನಮ್ಮ ವ್ಯಕ್ತಿತ್ವ ವಿಕಾಸನಕ್ಕೆ ಸದ್ಗುಣಗಳೇ ಶೃಂಗಾರವಾಗಬೇಕೆಂದು ತಮ್ಮ ವಚನಗಳಲ್ಲಿ ಸ್ಪಷ್ಟಪಡಿಸಿದ್ದಾರೆ.

ಸಮಾಜದ ಆಧುನಿಕ ಜಗತ್ತಿನಲ್ಲಿ ವಿಜ್ಞಾನ ತಂತ್ರಜ್ಞಾನ ಬೆಳೆದರೂ, ವೈಚಾರಿಕ ಮತ್ತು ವೈಜ್ಞಾನಿಕ ದೃಷ್ಟಿಕೋನವನ್ನು ಜನರು, ಅದರಲ್ಲೂ ವಿದ್ಯಾವಂತರು ಬೆಳೆಸಿಕೊಂಡಿಲ್ಲ. ಇನ್ನು ಪುರಾಣ, ಸ್ವರ್ಗ, ನರಕಗಳ ಪಾಪ, ಪುಣ್ಯಗಳ ಗುಂಗಿನಲ್ಲಿಯೇ ಇದ್ದಾರೆ, ಶರಣರು ಎಲ್ಲ ಹಳೆಯ ಪುರಾಣದ ಪರಿಕಲ್ಪನೆಗಳಿಗೆ ಆಧುನಿಕ ಮತ್ತು ವೈಚಾರಿಕ ಅರ್ಥವನ್ನು ಈ ಕೆಳಕಂಡ ವಚನದಲ್ಲಿ ಕೊಟ್ಟಿದ್ದಾರೆ. ಈ ವಚನ ಆಧುನಿಕ ಬದುಕಿಗೆ ದಾರಿದೀಪದಂತಿದೆ.

***ಸತ್ಕರ್ಮವೇ ಸ್ವರ್ಗ, ದುಷ್ಕರ್ಮವೇ ನರಕ***
***ಸದಾಚಾರವೇ ಧರ್ಮ ದುರಾಚರವೇ ನರಕ***
***ಹಿತನುಡಿಯೇ ಪುಣ್ಯ, ಬಿರುನಿಡಿಯೇ ಪಾಪ***
***ಪರೋಪಕಾರವೇ ಸುಖ, ಪರಪೀಡೆಯೇ ದುಃಖ***
***ಬಸವಪ್ರಭು ಮುರುಘೇಶ ತನ್ನ ತಾ ಅರಿತವನೇ ಜ್ಞಾನಿ***
***ತನ್ನ ತಾ ಮರೆತವನೇ ಅಜ್ಞಾನಿ***

ಹೀಗೆ ಶರಣರು ಪುರಾಣದ ಪರಿಕಲ್ಪನೆಗಳಿಗೆ ಹೊಸ ಅರ್ಥಗಳನ್ನು ಕೊಟ್ಟು ಜನಸಾಮಾನ್ಯರಲ್ಲಿ ಹೊಸ ರೀತಿಯ ಹೊಸ ಸಂವೇದನಗಳನ್ನು ಹುಟ್ಟು ಹಾಕುತ್ತರೆ. ದೇವರು ಧರ್ಮದ ಹೆಸರಿನಲ್ಲಿ ಸಾಮಾನ್ಯ ಜನರನ್ನು ಮೂಢನಂಬಿಕೆಗೆ ತಳ್ಳುವ ಶೋಷಣೆ ಮಾಡುವ ಸಾಧು ಸನ್ಯಾಸಿಗಳನ್ನು ನಿರ್ಭಿಡೆಯಾಗಿ ತರಾಟೆಗೆ ತೆಗೆದುಕೊಳ್ಳುತ್ತಾರೆ ಜನಸಾಮಾನ್ಯರು ಭಾವಜೀವಿಗಳು ಖಾದಿ, ಕಾವಿ ಖಾಕಿಗಳಿಗೆ ಶರಣೆನ್ನುತ್ತಾ ಬಂದವರು. ಆದರೇನು ಲಾಂಛನದಲ್ಲಿ ಎಚ್ಚರಿಸುತ್ತಾರೆ. ಜೀವನೋಪಾಯಕ್ಕಾಗಿ ಲಾಂಛನವಲ್ಲ ಲೋಕಕಲ್ಯಾಣಕ್ಕಾಗಿ ಲಾಂಛನ ಎಂದು ನೇರವಾಗಿ ಎಚ್ಚರಿಸುತ್ತಾರೆ ಈ ವಚನದಲ್ಲಿ:

***ಲೋಕಾಂತದಲ್ಲಿರುವಾಗ ಎಲ್ಲರು ವಿರಕ್ತರೆ***
***ಏಕಾಂತದಲ್ಲಿ ವಿಷಯಾಸಕ್ತರು***
***ಲಾಂಛನದಂತೆ ನಡೆ ಇಲ್ಲದಿದ್ದರೆ ಛೀ ಎನ್ನುವರು ಜನರು***
***ಜೀವನಕ್ಕಾಗಿ ಲಾಂಛನವಲ್ಲ, ಲೋಕ ಕಲ್ಯಾಣಕ್ಕಾಗಿ ಲಾಂಛನ.***

ಎಂಬ ಶರಣರ ವಚನವನ್ನು ಖಾದಿ, ಕಾವಿ, ಖಾಕಿ ಧಿಸಿದವರೆಲ್ಲರು ನಿನಪಿಡಬೇಕಿದೆ. ಇವರಿಂದಲೇ ದೇಶದ ಉಳಿವು ಇಲ್ಲವೇ ಅಳಿವು.

"ಏನಾದರೂ ಆಗು ಮೊದಲು ಮಾನವನಾಗು" ಎಂಬ ದಿವ್ಯ ಸಂದೇಶವನ್ನು ಕನ್ನಡ ನಾಡಿನ ಜನತೆಗೆ ನೀಡಿದ ಶ್ರೇಷ್ಠ ಸಾಹಿತಿ ಡಾ. ಸಿದ್ಧಯ್ಯ ಪುರಾಣಿಕರು. ಸ್ವತಂತ್ರಧೀರ ಸಿದ್ಧೇಶ್ವರಾ ಎಂಬ ಅಂಕಿತದಿಂದ ವಚನಗಳನು ರಚಿಸಿದ್ದರೆ. ಇದುವರೆಗೆ ಮೂರು ವಚನ ಸಂಗ್ರಹಗಳಲ್ಲಿ ಒಟ್ಟು ಒಂದುಸಾವಿರದಾ ಐದುನೂರು ವಚನಗಳನ್ನು ಪ್ರಕಟಿಸಿರುವರು.

ಆಯಾ ಸಮಾಜದ ಚಿತ್ರ ಸಮಕಾಲೀನ ಸಾಹಿತ್ಯದಲ್ಲಿ ಪ್ರತಿಬಿಂಬಿಸುತ್ತದೆ, ಎಂಬುದಕ್ಕೆ ನಿದರ್ಶನ ಇವರ ವಚನಗಳು, ಬಡವ, ಬಲ್ಲಿದ, ಒಳ್ಳೆಯವ, ಕೆಟ್ಟವ ಅವರನ್ನು ಸೂಕ್ಷ್ಮವಾಗಿ ಅವಲೋಕಿಸಿ ಅವರಲ್ಲಿರುವ ಭಿನ್ನತೆ, ಅಂತರ ಗುರುತಿಸಿದ್ದಾರೆ. ಅದನ್ನೇ:

**"ಉಂಡುದಕ್ಕಿಂತ ಉಳಿಸಿದ ಎಂಜಲು ಹೆಚ್ಚು**
**ಉಳ್ಳ ಕೆಲವರ ಬೆಳ್ಳಿ ತಟ್ಟೆಗಳಲ್ಲಿ**
**ಬಳಿದು ತಂದ ಎಂಜಲವೇ ಪರಮ ಪ್ರಸಾರದ**
**ಅಸಂಖ್ಯ ಅಭಾಗಿಗಳ ಮಣ್ಣ ಮಿಟ್ಟೆಗಳ.."**

ಹೀಗೆ ಅನೇಕ ವಚನಗಳಲ್ಲಿ ಸಾಮಾಜಿಕ ಅಸಮಾನತೆಯ ಚಿತ್ರವನ್ನು ಕಣ್ಣಿಗೆ ಅಟ್ಟುವಂತೆ ಚಿತ್ರಿಸಿದ್ದಾರೆ.

ಡಾ. ಚೆನ್ನಣ್ಣ ವಾಲೀಕಾರರು 'ಮುನ್ನೂರ ಮೂರು ವಚನಗಳು' ಎಂಬ ವಚನ ಸಂಕಲನವನ್ನು 1993ರಲ್ಲಿ ಹೊರತಂದಿರುವರು. ತಮ್ಮ ಮುನ್ನೂರ ಮೂರು ವಚನಗಳಿಗೆ ತಮ್ಮ ಹೆಸರನ್ನೇ ಅಂಕಿತವನ್ನಾಗಿಟ್ಟಿದ್ದಾರೆ. ಡಾ.ವಾಲೀಕಾರರ ವಚನ ಸಂಕಲನ ಇಂದಿನ ಆಧುನಿಕ ವಚನಕಾರರ ಅಂಕಿತ ಹಾಗೂ ಆಶಯಗಳಿಗೆ ಹೋಲಿಸಿದರೆ ಭಿನ್ನವಾಗಿ ನಿಲ್ಲುತ್ತದೆ. ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ ವಚನ ರಚನೆಗೈದದ್ದು ಕಂಡುಬರುತ್ತದೆ.

***ಜನರ ಕಣ್ಣೀರು ನೋಡಿ ನೋಡಿ ಅತ್ತುದಕ್ಕೆ,***
***ಕಣ್ಣುಗಳಲ್ಲ, ಕುಡುಗೋಲು ಆಗಿರುವಾಗ***
***ಆ ನೀರಿನಲ್ಲಿ ನಡೆದು ನಡೆದು ಸೆಟೆದುದಕ್ಕೆ***
***ಕಾಲುಗಳೆಲ್ಲಾ ಬಂದೂಕು ಆಗಿರುವಾಗ***
***ಆ ನೀರಿನಲ್ಲಿ ಬಿದ್ದುಬಿದ್ದು ಅವಯವಗಳೆಲ್ಲ***
***ಆಟಂಬಾಂಬುಗಳಾಗಿರುವಾಗ ಜನರ ಕಣ್ಣೀರು***
***ನಿಂತುಹೋಗುವ ಮಾತು ಇನ್ನು ದೂರವಿಲ್ಲ .***
***ಎಂದಾತ ನಮ್ಮ ವಾಲೀಕಾರ ಚೆನ್ನಣ್ಣ"***

ತುಳಿತಕ್ಕೊಳಗಾದ ಶ್ರಮಿಕ, ಕೆಳವರ್ಗದವರಿಗೆ ಎಷ್ಟೇ ಕಷ್ಟವಿದ್ದರೂ ಸಹ ಒಮ್ಮೆಯಾದರೂ ಕೆಳವರ್ಗದವರು ಸುಖವಾಗಿರಬಹುದೆಂಬ ಆಶಾಭಾವನೆ ವಚನಕಾರರದು. ಮುಂದಿನ ಭವಿಷ್ಯದ ಬೆಳಕಿಗಾಗಿ ತಮ್ಮ ವಚನದ ಮುಖಾಂತರ ನಿರೀಕ್ಷಿಸುತ್ತಾರೆ ಆ ಕ್ಷಣಗಳಿಗಾಗಿ ದಾರಿ ಕಾಯುತ್ತಾರೆ. ಮಾನವನು ವ್ಯರ್ಥ ಭ್ರಮಾಲೋಕ ಅಥವಾ ಕಲ್ಪನಾ ಲೋಕದಲ್ಲಿ ವಿಹರಿಸದೆ, ವಾಸ್ತವ ಬದುಕಿನ ಕುರಿತು ವಿಚಾರ ಮಾಡುವದೇ

ನಿಜವಾದಂತಹ ಬದುಕು ಎಂಬುದನ್ನು ವಚನಕಾರರು ಮಾರ್ಮಿಕವಾಗಿ ಹೇಳುತ್ತಾರೆ. ನಾವು ಕಲ್ಪನೆಯ ಕೂಸಾಗುವದು ಸಲ್ಲದು ವಾಸ್ತವ ಲೋಕಕ್ಕೆ ಬರಬೇಕೆಂಬ ಕಾಳಜಿಯನ್ನು ಡಾ. ಚೆನ್ನಣ್ಣ ವಾಲೀಕಾರವರು ಕೊಡುತ್ತಾರೆ.

ಸಿದ್ದರಾಮ ಪೋಲಿಸ ಪಾಟೀಲರು ಸಮಾಜದಲ್ಲಿ ಮನುಷ್ಯ ತನ್ನ ಸುತ್ತಮುತ್ತ ನಡೆಯುವ ದಿನನಿತ್ಯದ ಚಟುವಟಿಕೆಗಳ ಬಗ್ಗೆ ಲೋಕದ ಜನರ ಒರೆಕೋರೆಗಳ ಮೇಲೆ ಬೆಳಕು ಚೆಲ್ಲಿ ಅಲ್ಲಿನ ಅಂಕು–ಡೊಂಕುಗಳನ್ನು ಅತ್ಯಂತ ಖಾರವಾಗಿ ತಮ್ಮ ತ್ರಿಪದಿಗಳ ಅವಲೋಕಿಸಲಾಗಿದೆ. ಅವರ ಕೆಲವು ವಚನಗಳನ್ನು ಇಲ್ಲಿ ಸಮಾಜದಲ್ಲಿ ಮನುಷ್ಯ ಗರ್ವ ಹಾಗೂ ಅಹಂಭಾವದಿಂದ ಇರಬಾರದು, ವ್ಯಕ್ತಿಯ ಗರ್ವವೇ ಅವನ ನಾಶಕ್ಕೆ ಕಾರಣವಾಗುತ್ತದೆ. ಆದ್ದರಿಂದ ಅಹಂಭಾವ ಮನುಷ್ಯನಿಗೆ ಶೋಭೆಯಲ್ಲಿ ಮಾನವನ ಅಂತ್ಯಕ್ಕಾಗಿಯೇ ಅಹಂಕಾರ ಭಾವನೆ ಹುಟ್ಟಿ ಬೇರೆಯವರನ್ನು ನಿರ್ಲಕ್ಷಿಸುವಂತೆ ಮಾಡುವದು ಎಂಬುದನ್ನು ಒಂದು ತ್ರಿಪದಿಯಲ್ಲಿ ಮಾರ್ಮಿಕವಾಗಿ ವ್ಯಕ್ತಪಡಿಸಿದ್ದಾರೆ.

**"ತನ್ನ ಮೀರಿಪ ವ್ಯಕ್ತಿ ಇನ್ನಾರು ಇಹರೆಂದು**
**ತನ್ನ ಗುಂಗಿನಲಿ ತಾನಿರುವವರು ಒಮ್ಮೆ**
**ಮಣ್ಣು ಮುಕ್ಕುವನು ॥ ಸತ್ಯಜ್ಞ॥"**

ತಾನು ಪರರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಬಾಳಬೇಕಾಗುವವನು ಇತರರನ್ನು ನಿರ್ಲಕ್ಷಿಸಿದರೆ ಎಂತಹ ಅಪಾಯ ಬಂದೊದಗುತ್ತದೆ ಎಂಬುದನ್ನು ಈ ಮೇಲಿನ ವಚನದಲ್ಲಿ ತುಂಬಾ ಅರ್ಥಪೂರ್ಣವಾಗಿ ಪಾಟೀಲರು ಕಟ್ಟಿಟ್ಟಿದ್ದಾರೆ.

ಸಮಾಜದಲ್ಲಿ ನಡೆನುಡಿಯ ಬಗ್ಗೆ ತುಂಬಾ ಸೂಕ್ಷ್ಮ ಸಂವೇದನೆಯಿಂದ ಬಾಳಬೇಕೆಂಬ ಸಲಹೆಯನ್ನು ತಮ್ಮ ವಚನದಲ್ಲಿ ತಿಳಿಸುತ್ತಾ ಮನುಷ್ಯ ತನ್ನ ಮನಸ್ಸಿಗೆ ಬಂದದನ್ನು ನುಡಿಯುವುದು ಒಳ್ಳೆಯದಲ್ಲ. ತನ್ನ ಮನಸ್ಸಿಗೆ ತೋರಿದಂತೆ ಹೊಣೆಗೇಡಿತನದ ಮಾತಿನಿಂದ ಅನ್ಯರಿಗೆ ಗಾಯವಾಗಬಾರದೆಂಬ ಕಾಳಜಿಯನ್ನು ತಮ್ಮ ವಚನದಲ್ಲಿ ಈ ರೀತಿಯಾಗಿ ಹೇಳುತ್ತಾರೆ.

***"ಬಾಯಿ ನಿನ್ನದು ಎಂದು, ನಾಯಿಯೊಲು ಬೊಗಳದಿರು***
***ನ್ಯಾಯ, ನಯ, ಮಧುರ ನುಡಿ ಮೇಲು ಬೇರೆಯವರು***
***ಗಾಯಗೊಳಬಾರ್ದು ಸತ್ಯಜ್ಞ।"***

ಆಡುವ ಮಾತಿನಲ್ಲಿ, ಇಂಪಾದ ನಯ ವಿನಯತೆಯಿಂದ ಮಾತುಗಳು ಮುತ್ತಿನಂತಿರಬೇಕೆಂಬುದು ಅವರ ಮನದಾಳದ ಕಾಳಜಿಯಾಗಿದೆ.

ನಮ್ಮ ಭಾರತೀಯ ಸಮಾಜದಲ್ಲಿ ಮಹಿಳೆಯರ ಸ್ಥಿತಿಗತಿಗಳಂತೂ ಹೇಳತೀರದು. ಅವಳನ್ನು ಕೇವಲ ಭೋಗದ ವಸ್ತುವಾಗಿದ್ದರೆ. ಎಂಬ ಬಸವಾದಿ ಶರಣರ ದೃಷ್ಟಿಯನ್ನು ತಮ್ಮ ವಚನದಲ್ಲಿ ಸ್ಪಷ್ಟವಾಗಿ ವಾಸ್ತವಿಕ ನೆಲೆಯಲ್ಲಿ ಬಿಂಬಿಸಿದ್ದಾರೆ.

**ಉಪಸಂಹಾರ**

ಒಟ್ಟಾರೆಯಾಗಿ ಆಧುನಿಕ ವಚನ ಸಾಹಿತ್ಯಕ್ಕೆ ಆಕರ್ಷಿತರಾಗಿ ಈ ಪ್ರಕಾರವನ್ನು ಮತ್ತೊಮ್ಮೆ 12ನೇ ಶತಮಾನದಂತೆ ಇಂದಿನ ಆಧುನಿಕ ಯುಗದಲ್ಲಿ ವಚನ ಸಾಹಿತ್ಯವನ್ನು ಸ್ಥಾಪಿಸುವಲ್ಲಿ ಮಾಡಿದ ಪ್ರಯತ್ನ ಶ್ಲಾಘನೀಯವಾದುದು, ಆಧುನಿಕ ವಚನಕಾರರು ವಚನ ಸಾಹಿತ್ಯಕ್ಕೆ ನೀಡಿದ ಕೊಡುಗೆ ಅಮೂಲ್ಯವಾದುದು. ಆಧುನಿಕ ವಚನಕಾರರಲ್ಲಿ ಹೆಚ್ಚಿನ ವಚನಕಾರರು ಪ್ರಸ್ತುತ ವಿದ್ಯಮಾನಗಳು, ಸಾಮಾಜಿಕ ಸಮಸ್ಯೆಗಳು, ರಾಜಕೀಯ ಬೆಳವಣಿಗೆ, ಲಂಚ – ಭ್ರಷ್ಟಾಚಾರ ಗೊಡ್ಡು ಸಂಪ್ರದಾಯ, ಡಾಂಭಿಕ ಆಚರಣೆ ಕುರಿತಾಗಿ ವಚನ ರಚಿಸಿದ್ದಾರೆ. ಸಮಾಜದಲ್ಲಿರುವ ಅಂಕುಡೊಂಕು, ಓರೆಕೋರೆಗಳನ್ನು ಯಾವ ಹಂಗಿಲ್ಲದೆ ನಿರ್ದಾಕ್ಷಿಣ್ಯವಾಗಿ ವಿದಂಬಿಸುವ ಮನೋಈಭಾವ ಎದ್ದುಕಾಣುತ್ತದೆ. ಇವರು ವಚನ ಮಾಧ್ಯಮದಲ್ಲಿ ತಮ್ಮ ವಿಚಾರಗಳನ್ನು ಸಮಾಜಕ್ಕೆ ಅರ್ಪಿಸಿರುವದು ಗಮನಾರ್ಹವಾದುದು.

**ಪರಾಮರ್ಶನ ಗ್ರಂಥಗಳು**


- ಆರಾಧ್ಯ ಎಸ್. ಆರ್. (2015). ಆಧುನಿಕ ವಚನ ಚಂದನ. ರಚನ ಪ್ರಕಾಶನ, ಮೈಸೂರು.
- ಭಿಕ್ಷಾವರ್ತಿಮಠ. ಎಚ್. ಎ. (2016). ಆಧುನಿಕ ವಚನಕಾರರಾಗಿ ಡಾ. ಶಿವಮೂರ್ತಿ ಮುರುಘಾಶರಣರು. ಶೂನ್ಯ ಪೀಠಾರೋಹಣ. ಬೆಳ್ಳಿಹಬ್ಬ ಆಚರಣೆ ಸಮಿತಿ ಶ್ರೀ ಮುರುಘಾಮಠ, ಚಿತ್ರದುರ್ಗ
- ನಾಗಾಬಾಯಿ ಬುಳ್ಳಾ. (2017). ಆಧುನಿಕ ಸಾಹಿತ್ಯ ಸಾಧಕರು. ಜ್ಯೋತಿಶ್ರೀ ಪ್ರಕಾಶನ, ಗುಲಬರ್ಗಾ.
- ಸಿದ್ದರಾಮ ಪೋಲಿಸ ಪಾಟೀಲ. (2010). ಸತ್ಸಜ್ಜನ ವಚನಗಳು. ಬಸವ ಪ್ರಕಾಶನ, ಗುಲಬರ್ಗಾ.
- ಶರಣಶ್ರೀ (ಪ್ರ.ಸಂ.) ಕಲುಬುರ್ಗಿ. ಎಂ.ಎಂ. (ಸಂ.). (2016). ಶೂನ್ಯ ಪೀಠಾರೋಹಣ. ಬೆಳ್ಳಿಹಬ್ಬ ಆಚರಣೆ ಸಮಿತಿ ಶ್ರೀ ಮುರುಘಾಮಠ, ಚಿತ್ರದುರ್ಗ.